

## ಕಣ್ಮರೆಯ ದಾರಿಯಲ್ಲಿರುವ ಒಂದು ಪಕ್ಷಿಯ ಕಥೆ!

# ಹೋದೆಯ ದೂರ ಓ ದೊರವಾಯ..

ದೊರವಾಯನ ಹಕ್ಕಿಯ ಜೋಡಿ

**ದೊರವಾಯನ ಹಕ್ಕಿಯನ್ನು ರಾಷ್ಟ್ರಪಕ್ಷಿಯಾಗಿ ಘೋಷಿಸುವಂತೆ ಡಾ. ಸಲೀಂ ಅಲಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದರು. ಈ ಹಕ್ಕಿಗಳ ಸಂಖ್ಯೆ ಭಾರತದಲ್ಲಿ ಹೆಚ್ಚೆಂದರೆ 150 ಇರಬಹುದು. ಕರ್ನಾಟಕದಲ್ಲಂತೂ ಕಳೆದೊಂದು ದಶಕದಿಂದ ಇವುಗಳ ಸುಳಿವೇ ಇಲ್ಲ.**

**■ ಕೆ.ಎಚ್. ಓಬಳೇಶ್**

ಆಗ ಮಳೆಗಾಲದ ಸಮಯ. ಆಗಸದಿಂದ ಜಾರಿದ ಮಳೆಯ ಹನಿಗಳಿಗೆ ಭೂಮಿಯಲ್ಲಿ ಮರೆಯಾಗುವ ತವಕ. ಆಗಷ್ಟೇ ಸೂರ್ಯ ಮುಳುಗಿ ಕತ್ತಲು ಆವರಿಸತೊಡಗಿತ್ತು. ಹಾವೇರಿ ಜಿಲ್ಲೆ ರಾಣೇಬೆನ್ನೂರು ಬಳಿಯ ವನ್ಯಜೀವಿಧಾಮದ ಅರಣ್ಯ ವೀಕ್ಷಕನ ಅಂದಿನ ಕರ್ತವ್ಯದ ದಿನಚರಿಯೂ ಮುಗಿದಿತ್ತು. ಅರಣ್ಯದಲ್ಲಿನ ಕಾಲುದಾರಿ ಹಿಡಿದು ಮನೆಯತ್ತ ಮೆಲ್ಲನೆ ಹೆಜ್ಜೆ ಹಾಕತೊಡಗಿದ್ದ.

ದೊರವಾಯನ ಹಕ್ಕಿಯ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಜೋಡಿಯೊಂದು ಆತನ ಹೆಜ್ಜೆಯ ಸಪ್ಪಳಕ್ಕೆ ಬೆದರಿ ಹಾರಿಹೋಯಿತು. ಆಗ ಅವನ ಎದೆಯೊಳಗಿನ ಕುತೂಹಲದ ಹಕ್ಕಿ ರೆಕ್ಕೆ ಬಿಚ್ಚಿತು. ಮಂದ ಬೆಳಕಿನಲ್ಲಿಯೇ ಹುಡುಕಾಟ ನಡೆಸಿದ ಆತನಿಗೆ ಹೆಣ್ಣು ಹಕ್ಕಿಯು ಒಂದು ಮೊಟ್ಟೆ ಇಟ್ಟಿರುವುದು ಗೋಚರಿಸಿತು. ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಈ ಸುದ್ದಿ ಮುಟ್ಟಿಸಿ ಅವರ ವಿಶ್ವಾಸಗಳಿಸುವ ಆಸೆ ಅವನಲ್ಲಿ ಚಿಗುರೊಡೆಯಿತು. ಆದರೆ, ತಾನು ಅಳಿವಿನಂಚಿನಲ್ಲಿರುವ ಪಕ್ಷಿಸಂಕುಲದ ಬದುಕಿಗೆ ಕಂಟಕ ತರುತ್ತಿದ್ದೇನೆ ಎಂಬ ಎಳ್ಳಷ್ಟು ಆಲೋಚನೆಯೂ ಅವನ ತಲೆಯಲ್ಲಿ ಹೊಳೆಯಲಿಲ್ಲ.

ಹಕ್ಕಿ ಮೊಟ್ಟೆ ಇಟ್ಟಿರುವ ವಿಷಯ ಅರಣ್ಯ ಇಲಾಖೆಯಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು. ವನ್ಯಜೀವಿ ಛಾಯಾಗ್ರಹಣದಲ್ಲಿ ಆಸಕ್ತಿಯಿದ್ದ ಅಧಿಕಾರಿಗಳ ಕಿವಿಗೂ ಈ ಸುದ್ದಿ ಮುಟ್ಟಿತು. ರಾಣೇಬೆನ್ನೂರಿನ ಕಾಡಿನತ್ತ ಉತ್ಸಾಹಿ ಅಧಿಕಾರಿಗಳ ದಂಡು ಆಗಮಿಸಿತು. ಅವರ ಬಗಲಲ್ಲಿ ಉದ್ದನೆಯ ಲೆನ್ಸ್‌ಗಳು, ಕ್ಯಾಮೆರಾಗಳು ಜೋಕಾಲಿಯಾಡುತ್ತಿದ್ದವು. ಅಪರೂಪದ ಹಕ್ಕಿಗಳು, ಅವುಗಳ ಗೂಡಿನ ಫೋಟೊ ಕ್ಲಿಕ್ಕಿಸಲು ರಾತ್ರಿ–ಹಗಲು ಜಾಗರಣೆ ಮಾಡಿದರು.

ಮೌನವಷ್ಟೇ ಜೀವಿಸಿದ್ದ ಕಾಡಿನಲ್ಲಿ ಒಮ್ಮೆಲೆ ಗದ್ದಲ ಮನೆ ಮಾಡಿತು. ತನ್ನ ನೆಲೆಯಲ್ಲಿ ಬೂಟಿನ ಸದ್ದು ಕೇಳಿದಾಗ ಆ ಜೋಡಿಹಕ್ಕಿಯ ಎದೆಯಲ್ಲಿ ಆತಂಕ ಹೆಚ್ಚಾಗತೊಡಗಿತು. ಮೊಟ್ಟೆಗೆ ನೀವೇ ಕಾವು ಕೊಡಿ ಎಂಬರ್ಥದಲ್ಲಿ ಅವು ಗೂಡಿನತ್ತ ಸುಳಿಯಲಿಲ್ಲ. ಈ ಹೃದಯ ವಿದ್ರಾವಕ ಘಟನೆ ನಡೆದು ಮೂರು